ನಾಡ ಕಛೇರಿ

20 (38) ಶ್ರೀ ರುದ್ರೇಶ್‌ಗೌಡ, ವೈ.ಎನ್. (ಬೇಲೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆ, ಅರಸೀಕೆರೆ ತಾಲ್ಲೂಕಿನ ಜಾವಗಲ್ ಹೋಬಳಿಯು ಅತ್ಯಂತ ದೊಡ್ಡ ಹೋಬಳಿಯಾಗಿರುವುದು ನಿಜವೇ;

ಆ) ದೊಡ್ಡ ಹೋಬಳಿಯಾಗಿದ್ದಲ್ಲಿ ಇಲ್ಲಿ ನಾಡಕಛೇರಿಯ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಜಾವಗಲ್ ಹೋಬಳಿಗೆ ನಾಡಕಛೇರಿ ಮಂಜೂರು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು):

ಅ) ಭೌಗೋಳಿಕ ವಿಸ್ತೀರ್ಣ, ಭೂ ಕಂದಾಯ, ಜನಸಂಖ್ಯೆ ಹಾಗೂ ಜಾನುವಾರು ಸಂಖ್ಯೆಗಳ ಆಧಾರದನ್ವಯ ಅರಸೀಕೆರೆ ತಾಲ್ಲೂಕಿನ ಜಾವಗಲ್ ಹೋಬಳಿಯು ಹಾಸನ ಜಿಲ್ಲೆಯಲ್ಲಿ ನಾಲ್ಕನೆಯ ದೊಡ್ಡ ಹೋಬಳಿಯಾಗಿರುತ್ತದೆ.

ಆ) ಸರ್ಕಾರದ ಗಮನಕ್ಕೆ ಬಂದಿದೆ.

ಇ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಸರ್ಕಾರಿ ಐ.ಟಿ.ಐ ಕಾಲೇಜು ಕಟ್ಟಡ

21 (39) ಶ್ರೀ ರುದ್ರೇಶಗೌಡ. ವೈ.ಎನ್ (ಬೇಲೂರು): ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರು ನಗರದಲ್ಲಿ ಸರ್ಕಾರಿ ಐ.ಟಿ.ಐ. ಕಾಲೇಜು ಇರುವುದು ನಿಜವೇ;

ಆ) ಹಾಗಿದ್ದಲ್ಲಿ, ಯಾವ ಸಾಲಿನಲ್ಲಿ ಕಾಲೇಜು ಮಂಜೂರಾಗಿರುತ್ತದೆ;

ಇ) ಈ ಕಾಲೇಜಿಗೆ ಕಟ್ಟಡ ಇಲ್ಲದಿರುವುದು ನಿಜವೇ;

ಈ) ಹಾಗಿದ್ದಲ್ಲಿ, ಈ ಕಾಲೇಜಿಗೆ ಸ್ವಂತ ಕಟ್ಟ ನಿರ್ಮಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಬಿ.ಎನ್ ಬಚ್ಚೇಗೌಡ (ಕಾರ್ಮಿಕ ಸಚಿವರು):

ಅ) ಹೌದು

ಆ) 2007–08ನೇ ಸಾಲಿನಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾರಂಭಿಸಲಾಗಿದೆ

ಇ) ಹೌದು